
# ಪುಸ್ತಕ ಪರಾಗ

## ಬಟಾ ಬಯಲು




**ಸುಮಾರು** ನಾಲ್ಕು ದಶಕಗಳಿಂದ ಕಾವ್ಯರಚನೆಯಲ್ಲಿ ತೊಡಗಿಕೊಂಡಿರುವ ಸತ್ಯಾನಂದ ಪಾತ್ರೋಟ ಅವರ ಒಂಬತ್ತನೇ ಕವನ ಸಂಕಲನ 'ಬಟಾ ಬಯಲು'. ಮುದ್ದಣ ಕಾವ್ಯ ಪ್ರಶಸ್ತಿಯನ್ನು ಪಡೆದಿರುವ ಈ ಸಂಕಲನದ ರಚನೆಗಳು, ಕಾವ್ಯಮೋಹಿಯೊಬ್ಬ ತನ್ನ ಕಾಲದ ತವಕತಲ್ಲಣಗಳಿಗೆ ನೀಡಿರುವ ಸೃಜನಶೀಲ ಪ್ರತಿಕ್ರಿಯೆಯ ರೂಪದಲ್ಲಿ ಗಮನಸೆಳೆಯುತ್ತವೆ.

ಸಂಕಲನದ ಮೊದಲ ಕವಿತೆ 'ಪ್ರೇಮದೋಲೆ', ಸಮಕಾಲೀನ ಸಂದರ್ಭದ ಬಿಕ್ಕಟ್ಟುಗಳು ಕವಿಮನಸ್ಸನ್ನು ಹೇಗೆ ಗಾಸಿಗೊಳಿಸಿದೆ ಎನ್ನುವುದನ್ನು ಚಿತ್ರಿಸುತ್ತದೆ. ಯುಗಾದಿಯ ದಿನದಂದು ಗೆಳತಿಗೆ ಪ್ರೇಮದೋಲೆಯನ್ನು ಬರೆಯಲು ಹೊರಟ ಕವಿಗೆ, ಬೆಲ್ಲದ ಬದಲು ಕಹಿ ನೆನಪುಗಳೇ ಉಕ್ಕಿಬರುತ್ತವೆ. 'ಕಲಬುರ್ಗಿ, ವೇಮುಲ / ಪನ್ಸಾರೆ, ಧಾಬೋಲ್ಕರ್, ಗೌರಿಯಂತವರು' ನೆನಪಾಗಿ, ದಾನಮ್ಮನ ನೆನಪು ಉಕ್ಕಿಬಂದು, ಕಣ್ಣು ಮಂಜಾಗಿ, ಪೆನ್ನು ಹೆಪ್ಪುಗಟ್ಟಿದಂತನ್ನಿಸುತ್ತದೆ. ಹಾಗೆಂದು ಕವಿ ಸುಮ್ಮನೆ ಕೂರುವುದಿಲ್ಲ. ಸುತ್ತಮುತ್ತಲು ಸಂಕಟಗಳೇ ಕಿಕ್ಕಿರಿದಿರುವ ಸಂದರ್ಭದಲ್ಲೂ – ಪ್ರೀತಿಯಿಂದಲೇ ಕತ್ತಲನ್ನು ಭೇದಿಸಿದ ಹಾಗೂ ಜಡವನ್ನು ಚೇತನಗೊಳಿಸಿದ ತಥಾಗತ, ಬಸವಣ್ಣ, ಗಾಂಧಿ, ತೆರೇಸಾ ಅವರನ್ನು ನೆನಪಿಸಿಕೊಳ್ಳುತ್ತಾರೆ. ಈ ಬೆಳಕಿಂಡಿಗಳೇ ಪಾತ್ರೋಟರ ಕಾವ್ಯಕ್ಕೆ ಜೀವಸ್ಪರ್ಶವನ್ನು ಕರುಣಿಸಿವೆ.

'ಎಲ್ಲ ಬೇರಿಗೂ ಉಂಟು / ಬೆವರಿನ ನಂಟು / ನೆಲ ಮುಟ್ಟುವ ಪ್ರೀತಿಯ ಗಂಟು / ಇದು ನನ್ನ ಇಡಿಗಂಟು / ಅಲ್ಲ ಕಳ್ಳಿ ಹಾಲಿನ ನಂಟು' ಎನ್ನುವ ಸಾಲುಗಳು, ಜಗತ್ತಿನ ಸಣ್ಣಸಣ್ಣ ಸಂಗತಿಗಳು ಹಾಗೂ ದೀನ ದಲಿತರ ಕುರಿತ ಕವಿ–ಕಾವ್ಯದ ಕಾಳಜಿಯನ್ನು ಸೂಚಿಸುವಂತಿವೆ. ಈ ಕಾಳಜಿ, ಕವಿಯಾಗಿ ಸತ್ಯಾನಂದ ಪಾತ್ರೋಟರ ತಾತ್ವಿಕತೆಯೂ ಹೌದು. ಈ ಅರಿವಿನಿಂದಲೇ 'ಸ್ವಚ್ಛ ಭಾರತದ ರಾಯಭಾರಿ'ಯಾಗಿ ಇರುವೆಯನ್ನು ಕಾಣುವುದು ಅವರಿಗೆ ಸಾಧ್ಯವಾಗಿದೆ.

ಸಾಹಿತ್ಯದ ಸಾಮಾಜಿಕ ಜವಾಬ್ದಾರಿಯನ್ನು ಮರೆತಿರುವ ಬರಹಗಾರರ ಕುರಿತ ಬೇಸರ 'ಅರ್ಧ ರಾತ್ರಿಯ ಕೊಡೆ' ಕವಿತೆಯಲ್ಲಿದೆ. 'ಎಲ್ಲದರ ಸೃಷ್ಟಿಕರ್ತರು ನಾವೇ' ಎಂದು ಬೀಗುತ್ತ, ಅಧಿಕಾರ ಕೇಂದ್ರಗಳಿಗೆ 'ಉಘೇ ಉಘೇ' ಎನ್ನುವವರ ಬುದ್ಧಿಗೆ ಗ್ರಹಣ ಹಿಡಿದಿರುವುದರ ಬಗ್ಗೆ ಮರುಕಪಡುತ್ತಾರೆ.

ವಚನ ಸಾಹಿತ್ಯದ ಪ್ರೇರಣೆಯನ್ನು ಪಾತ್ರೋಟದ ಕಾವ್ಯದ ಅಂತರ್ಜಲದ ರೂಪದಲ್ಲಿ ಕಾಣಬಹುದು. 'ಶೂನ್ಯದಲಿ ಶೂನ್ಯ' ರಚನೆ, 'ನೀನೇ ನಿಜವಾದ ಸಮಾನತೆಯ ಹರಿಕಾರ' ಎಂದು ಬಸವಣ್ಣನನ್ನು ಬಣ್ಣಿಸುತ್ತದೆ. ಸಂಕಲನದ ಶೀರ್ಷಿಕೆ ಪದ್ಯವಾದ 'ಬಟಾ ಬಯಲು' ಕವಿತೆ – 'ಮರದಂತೆ ನೀನು / ನಿನ್ನಂತೆ ಮರ / ಇಬ್ಬರಲ್ಲೂ ಇಲ್ಲ ಫರಕು, ಪರಾಕು' ಎಂದು ಅಕ್ಕನನ್ನು ಅರ್ಥೈಸುತ್ತದೆ. 'ಕೊರಡಿಗೂ ಜೀವ ಕಳೆ ತಂದು / ಕಾಡಿಗೂ ಮಾತು ಬರಸಿದಳು' ಎನ್ನುತ್ತ, 'ಬಯಲಿನಲಿ ಬಯಲನೇ ಬಿತ್ತಿ / ಬಟಾಬಯಲಾದವರು ನೀವು' ಎನ್ನುವ ನಿಲುವಿಗೆ ಕವಿತೆ ತಲುಪುತ್ತದೆ. ಅಕ್ಕ ಮತ್ತು ಪ್ರಕೃತಿಯ ನಡುವಿನ ಅವಿನಾಭಾವದ ಈ ಅರಿವು, ವಚನಕಾರರ ಒಟ್ಟು ಪರಂಪರೆಗೆ ಸಲ್ಲುವ ಮಾತೂ ಹೌದು; ಕನ್ನಡ ಕಾವ್ಯ ಪರಂಪರೆ ಪ್ರತಿಪಾದಿಸುವ ವಿವೇಕವೂ ಹೌದು.

**ಲೇ: ಸತ್ಯಾನಂದ ಪಾತ್ರೋಟ; ಪು: 96; ಬೆ: ₹ 120; ಪ್ರ: ಸಮತಾ ಪ್ರಕಾಶನ, ಬಾಗಲಕೋಟೆ.**
**ಫೋನ್: 9845012151**